ಓ.ಎಸ್‌ಃ 8/2009

ಪಿ.ಡಬ್ಲ್ಯೂಃ 04

**ದಿನಾಂಕಃ 10-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು 3 ಮತ್ತು 4 ನೇ ಪ್ರತಿವಾದಿಗಳ ಪರ ಶ್ರೀ ಎಸ್.ವಿ.ಜಿ. ವಕೀಲರಿಂದಃ**

**10**. ವಾದಿಯು ನನಗೆ ಯಾವುದೇ ಸಂಬಂಧಿಕನು ಆಗಿರುವುದಿಲ್ಲ. ವಾದಿಯು ರಾಜಕಾರಣಿ ಆಗಿರುತ್ತಾನೆ ಎಂದರೆ ಸರಿ. ವಾದಿಯು ಸನ್ 2013-18 ರವರೆಗೆ ರಾಜ್ಯ ಜವಳಿ ಮೂಲ ಸೌಕರ್ಯದ ಉಪಾಧ್ಯಕ್ಷರು ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯು ಖೊಟ್ಟಿ ದಾಖಲಾತಿಯನ್ನು ಮಾಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ರಾಜ್ಯ ಜವಳಿ ಮೂಲ ಸೌಕರ್ಯದ ಉಪಾಧ್ಯಕ್ಷರಾಗಿದ್ದಾಗ ನಗರಸಭೆಯ ಆಸ್ತಿಯನ್ನು ನೀಡಿರುತ್ತಾರೆ ಎಂದು ದಾಖಲಾತಿಯನ್ನು ಸೃಷ್ಟಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಪ್ರತಿಕಾ ಪ್ರಕಟಣೆಯಲ್ಲಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

11. ದಾವಾ ಆಸ್ತಿಯ ಸರ್ವೆ ನಂ.63 ಕ್ಷೇತ್ರ 31 ಎಕರೆ 35 ಗುಂಟೆ ಆಗಿರುತ್ತದೆ. ಜಮೀನಿನ ಚಕಬಂದಿ ನನಗೆ ಹೇಳಲು ಬರುವುದಿಲ್ಲ. ಜಮೀನಿನ ಮೂಲ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಮಾರಾಟ ಮಾಡಲು ಇಚ್ಚೆಸಿದ್ದರು. 1ನೇ ಪ್ರತಿವಾದಿಗೆ ದಾವಾ ಆಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡುತ್ತಿದ್ದಾರೆ ಎಂದು ರಮೇಶ ಮಾಂಗರವರು ತಿಳಿಸಿರುತ್ತಾರೆ.

12. ಸನ್ 2006 ರಲ್ಲಿ ತಿಳಿಸಿರುತ್ತಾರೆ. ತಿಳಿಸಿದ 2-3 ತಿಂಗಳ ನಂತರ ಮಾತುಕತೆ ಆಗಿರುತ್ತದೆ. ಮಾತುಕತೆ ದಿಃ28.10.2006 ರಂದು ಆಗಿರುತ್ತದೆ. ಮಾತುಕತೆ ಜಮಖಂಡಿ ಮೀನುಗಾರಿಕೆ ಮಾಟುಕಟ್ಟೆಯಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ನಾನು, ರಮೇಶ ಮೋರೆ, ರಮೇಶ ಮಾಂಗ, ಸೈಯದ್ ಕಂಗನೊಳ್ಳಿ, ಶ್ರೀಶೈಲ್ ಮತ್ತು ನಜೀರ ರವರು ಹಾಜರಿದ್ದೇವು. ಸದರಿ ದಿನದಿಂದು 80,000/- ಹಣವನ್ನು ನೀಡಿರುತ್ತೇವೆ. ಎರಡು ದಿನಗಳ ನಂತರ ಪತ್ರ ವ್ಯವಹಾರ ಆಗಿರುತ್ತದೆ. ಬಾಂಡನ್ನು 1ನೇ ಪ್ರತಿವಾದಿ ತಂದಿರುತ್ತಾರೆ. ರೂ.200 ಗಳ ಬಾಂಡ ಆಗಿರುತ್ತದೆ.

ಪತ್ರವನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಿನ ಯಾವ ವಾರ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ದಿನ ಕಛೇರಿ ಪ್ರಾರಂಭವಿತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಕಛೇರಿಯ ಮುಂದೆ ಇರುವ ಬಾಂಡ ರೈಟರ ಅಂಗಡಿಯಲ್ಲಿ ಮಾಡಲಾಗಿರುತ್ತದೆ. ಒಟ್ಟು ರೂ.1,10,000/- ಗಳಿಗೆ ಮಾತುಕತೆ ಆಗಿರುತ್ತದೆ. ಒಟ್ಟು ಆಸ್ತಿಗೆ ರೂ.1,10,000/- ಗಳಿಗೆ ನಿಗದಿಮಾಡಲಾಗಿರುತ್ತದೆ. ಮುಳವಾಡದಿಂದ ಜಮಖಂಡಿ ಎಷ್ಟು ಕಿ.ಮಿ. ಇರುತ್ತದೆ ಎಂದು ನನಗೆ ಗೊತ್ತಿಲ್ಲ.

13. ಮುಳವಾಡದಲ್ಲಿ ಜಮೀನು ಎಷ್ಟು ಹಣಕ್ಕೆ ಮಾರಾಟವಾಗುತ್ತದೆ ಎಂದು ನನಗೆ ಗೊತ್ತಿಲ್ಲ. ಮುಳವಾಡ ಗ್ರಾಮದಲ್ಲಿ ಇರುವ ಜಮೀನು ಎಕರೆಗೆ 2-3 ಲಕ್ಷ ರೂಗಳಿಗೆ ಮಾರಾಟವಾಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ಕಾರದವರು 2000-3000 ಜಮೀನುಗಳನ್ನು ಸ್ವಾಧಿನಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

14. ವನ ಜಮೀನಕ್ಕೆ 1 ಎಕರೆಗೆ 7-8 ಲಕ್ಷ ರೂಗಳಿಗೆ ಮತ್ತು ನೀರಾವರಿ ಜಮೀನಕ್ಕೆ 1 ಎಕರೆ 9 ಲಕ್ಷ ರೂಗಳಿಗೆ ನಿಗಧಿಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಜಮೀನ ಮೌಲ್ಯ ಜಾಸ್ತಿ ಆಗಿರುವ ಕಾರಣ ನಾನು ಮತ್ತು ವಾದಿ ಮತ್ತು ಸಾಕ್ಷಿದಾರರು ಸೇರಿ ಖೊಟ್ಟಿ ದಾಖಲಾತಿಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

15. ಸದರಿ ಪತ್ರ ವ್ಯವಹಾರದ ದಿನ ಉಳಿದ ಹಣ ನೀಡಿ ನೋಂದಣಿ ಮಾಡಿಸಿಕೊಳ್ಳಲು ಯಾವ ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಪಹಣಿ ಪತ್ರಿಕೆಯಲ್ಲಿ ಪಿ.ಟಿ.ಸಿ.ಎಲ್ ನಮೂದು ಇರುವ ಕಾರಣ ಅದನ್ನು ಅನುಮತಿಯನ್ನು ಪಡೆದುಕೊಂಡು ಮಾರಾಟ ಮಾಡುತ್ತೇನೆ ಎಂದು ತಿಳಿಸಿದ ಕಾರಣ ಕ್ರಯ ಪತ್ರ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ದಿಃ 21.09.2005 ರಂದು ಜಿಲ್ಲಾಧಿಕಾರಿ ಆಸ್ತಿಯನ್ನು ಮಾರಾಟ ಮಾಡಲು ಪರವಾಣಿಗೆಯನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪರವಾಣಿಗೆ ನೀಡಿದ ಕಾರಣ ಪರವಾಣಿಗೆ ಪಡೆದುಕೊಳ್ಳುವ ಅವಶ್ಯಕತೆ ಇರಲ್ಲಿಲ್ಲಾ ಎಂದರೆ ಸಾಕ್ಷಿಯು 1ನೇ ಪ್ರತಿವಾದಿಯು ಪರವಾಣಿಗೆ ಪಡೆದುಕೊಂಡು ಮಾರಾಟ ಮಾಡುತ್ತೇವೆ

ಎಂದು ತಿಳಿಸಿದ ಕಾರಣ ಕ್ರಯ ಪತ್ರ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಪರವಾಣಿಗೆ ಪಡೆದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ನಾನು, ವಾದಿ ಮತ್ತು ಸಾಕ್ಷಿದಾರರು ಸೇರಿಕೊಂಡು ದಾಖಲಾತಿಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**